ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**ಸಂಕೇತ ಸಂಖ್ಯೆ : 85-K**
**Code No. : 85-K**

**CCE RF**
**CCE RR**
**REVISED**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**
**(ಹೊಸ ಪಠ್ಯಕ್ರಮ / New Syllabus)**
**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 09. 04. 2020 ] [ Date : 09. 04. 2020
ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.


https://byjus.com

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. 1453 ರಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು

 (A) ಅರಬ್ಬರು

 (B) ಅಟೋಮನ್ ಟರ್ಕರು

 (C) ಇಟಲಿಯನ್ನರು

 (D) ಪೋರ್ಚುಗೀಸರು

2. ಕ್ವಿಟ್ ಇಂಡಿಯಾ ಚಳುವಳಿಯು ಕಾಂಗ್ರೆಸ್ಸೇತರ ನಾಯಕರಿಗೆ ನಾಯಕತ್ವವನ್ನು ನೀಡಿತು.

 ಈ ಕೆಳಗಿನವರಲ್ಲಿ ಕಾಂಗ್ರೆಸ್ಸೇತರ ನಾಯಕರನ್ನು ಗುರುತಿಸಿ :

 (A) ಕಸ್ತೂರ್‌ಬಾ ಗಾಂಧಿ

 (B) ಡಾ. ಬಿ.ಆರ್. ಅಂಬೇಡ್ಕರ್

 (C) ಜಯಪ್ರಕಾಶ್ ನಾರಾಯಣ್

 (D) ಮೌಲಾನಾ ಅಬ್ದುಲ್ ಕಲಾಂ ಆಜಾದ್

3. ಪಂಚಶೀಲ ತತ್ವಗಳಿಗೆ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ ಭಾರತದ ಪ್ರಧಾನಿ

 (A) ಜವಾಹರಲಾಲ್ ನೆಹರು

 (B) ಲಾಲ್ ಬಹಾದ್ದೂರ್ ಶಾಸ್ತ್ರಿ

 (C) ಇಂದಿರಾ ಗಾಂಧಿ

 (D) ಅಟಲ್ ಬಿಹಾರಿ ವಾಜಪೇಯಿ



https://byjus.com

BYJU'S
The Learning App



4. ಬಾಲಕಿಯರ ಸಬಲೀಕರಣಕ್ಕಾಗಿ "ಬಾಲಿಕಾ ಸಂಘ"ಗಳನ್ನು ಸ್ಥಾಪಿಸಿ, ನಿರ್ವಹಿಸಬೇಕಾದವರು

(A) ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ

(B) ಮಕ್ಕಳ ಗ್ರಾಮ ಸಭೆ

(C) ಮಕ್ಕಳ ಸುರಕ್ಷತಾ ಸಮಿತಿ

(D) ಅಂಗನವಾಡಿಗಳು

5. ಕಾರ್ಗಿಲ್ ಸಮೀಪದ ದ್ರಾಸ್‌ನಲ್ಲಿ ಅತೀ ಕಡಿಮೆ ಉಷ್ಣಾಂಶವು ದಾಖಲಾಗಿದೆ. ಏಕೆಂದರೆ ಇದು

(A) ಸೂರ್ಯನ ನೇರವಾದ ಕಿರಣಗಳನ್ನು ಪಡೆಯುತ್ತದೆ

(B) ಸಮುದ್ರಕ್ಕೆ ಹತ್ತಿರದಲ್ಲಿದೆ

(C) ಅತೀ ಎತ್ತರದ ಪ್ರದೇಶದಲ್ಲಿದೆ

(D) ನೈರುತ್ಯ ಮಾನ್ಸೂನ್ ಮಾರುತಗಳ ಪ್ರಭಾವಕ್ಕೆ ಒಳಪಟ್ಟಿದೆ

6. ನಮ್ಮ ಸಂವಿಧಾನದ 21ನೇ ವಿಧಿಯು ತಿಳಿಸುವುದೇನೆಂದರೆ

(A) ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡುವುದು ಸರ್ಕಾರಗಳ ಜವಾಬ್ದಾರಿ

(B) ಅಲ್ಪ ಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡುವುದು

(C) ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿಗೆ ಅವಕಾಶಗಳನ್ನು ನೀಡುವುದು ರಾಜ್ಯ ಸರ್ಕಾರಗಳ ಕರ್ತವ್ಯ

(D) ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸುವುದು



https://byjus.com

BYJU'S
The Learning App



7. ಈ ಕೆಳಗಿನವುಗಳಲ್ಲಿ ಸರ್ಕಾರದ ತೆರಿಗೆಯೇತರ ವರಮಾನ ಆಗಿರುವುದು

    (A) ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.)

    (B) ವಿವಿಧ ರೀತಿಯ ದಂಡಗಳು

    (C) ಆಮದು ರಫ್ತು ಸುಂಕ

    (D) ಸ್ಟ್ಯಾಂಪ್ ಶುಲ್ಕ

8. 'ಬಿಳಿಕ್ರಾಂತಿಯ ಪಿತಾಮಹ' ಎಂದು ಪ್ರಖ್ಯಾತರಾದ ಉದ್ಯಮಿ

    (A) ಡಾ. ಪ್ರತಾಪ್ ರೆಡ್ಡಿ

    (B) ನರೇಶ್ ಗೋಯಲ್

    (C) ವರ್ಗೀಸ್ ಕುರಿಯನ್

    (D) ಕಿರಣ್ ಮುಜುಮ್‌ದಾರ್ ಷಾ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $8 \times 1 = 8$

9. ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು ?

10. ರಾಜಾ ರಾಮ್‌ಮೋಹನ್ ರಾಯರ ಸತಿ ಪದ್ಧತಿ ವಿರೋಧಿ ಹೋರಾಟವನ್ನು ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಹೇಗೆ ಬೆಂಬಲಿಸಿದನು ?

11. ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸುವರು ?

12. ಹೆಣ್ಣು ಭ್ರೂಣ ಹತ್ಯೆ ಎಂದರೇನು ?

13. ಉಷ್ಣ ವಲಯದ ಎಲೆ ಉದುರಿಸುವ ಕಾಡುಗಳನ್ನು 'ಮಾನ್ಸೂನ್ ಕಾಡುಗಳು' ಎಂದು ಕರೆಯುವರು. ಏಕೆ ?

14. ಜನಸಾಂದ್ರತೆ ಎಂದರೇನು ?

15. ಸಾಟಿ ವಿನಿಮಯ ಪದ್ಧತಿ ಎಂದರೇನು ?

16. ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಏಕೆ ಒಂದು ಮಹತ್ವದ ದಿನವಾಗಿದೆ ?



https://byjus.com

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 8 × 2 = 16

17. ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು ?

18. 1961 ರಲ್ಲಿ ಪೋರ್ಚುಗೀಸರಿಂದ ಗೋವಾವನ್ನು ಹೇಗೆ ಮುಕ್ತಗೊಳಿಸಲಾಯಿತು ?

19. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳೇನು ?

**ಅಥವಾ**

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳನ್ನು ವಿವರಿಸಿ.

20. "ಸಾಮಾಜಿಕ ಸ್ಥರವಿನ್ಯಾಸವು ವಿವಿಧ ರೂಪಗಳಲ್ಲಿದೆ." ಹೇಗೆ ?

**ಅಥವಾ**

1970 ರ ದಶಕದಲ್ಲಿ ಡಿ. ದೇವರಾಜ ಅರಸುರವರು ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆಗಳನ್ನು ಯಾವ ರೀತಿಯಲ್ಲಿ ತಂದರು ?

21. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳನ್ನು ವ್ಯತ್ಯಯಿಸಿ.

22. ಮಣ್ಣಿನ ಸವೆತಕ್ಕೆ ಕಾರಣಗಳೇನು ?

23. "ಸ್ವಸಹಾಯ ಸಮೂಹಗಳು ಮಹಿಳೆಯರ ಸ್ವಾಯತ್ತತೆ ಮತ್ತು ಘನತೆಯನ್ನು ಹೆಚ್ಚಿಸಿವೆ." ಹೇಗೆ ?

24. "ಜಾಗತೀಕರಣದಿಂದ ಗ್ರಾಹಕರಿಗೆ ಅನುಕೂಲವಾಗಿದೆ." ವಿಶ್ಲೇಷಿಸಿ.

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲಿ ಉತ್ತರಿಸಿ :** 9 × 3 = 27

25. ಬ್ರಿಟಿಷ್ ಶಿಕ್ಷಣದ ಪ್ರಭಾವದಿಂದ ಉಂಟಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ತಲೆಮಾರುಗಳ ಸೃಷ್ಟಿಗೆ ಹೇಗೆ ಕಾರಣವಾದವು ?

26. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.

**ಅಥವಾ**

ಆರ್ಯ ಸಮಾಜದ ಉದ್ದೇಶಗಳನ್ನು ವಿವರಿಸಿ.



https://byjus.com

BYJU'S
The Learning App



27. "ಎರಡನೇ ಮಹಾಯುದ್ಧವು ಅತ್ಯಂತ ಬರ್ಬರವಾದುದು." ಹೇಗೆ ?

28. ಭಾರತದ ಆಂತರಿಕ ಸಮಸ್ಯೆಯಾಗಿರುವ ಕೋಮುವಾದದ ನಿವಾರಣೆಗೆ ನಿಮ್ಮ ಸಲಹೆಗಳೇನು ?

29. ಸಂಘಟಿತ ವಲಯ ಮತ್ತು ಅಸಂಘಟಿತ ವಲಯದ ದುಡಿಮೆಗಾರರನ್ನು ವ್ಯತ್ಯಯಿಸಿ.

30. ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಪ್ರಾಮುಖ್ಯತೆ ಏನು ?

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳನ್ನು ತಿಳಿಸಿ.

31. ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳನ್ನು ಪಟ್ಟಿ ಮಾಡಿ.

32. ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರಮುಖ ಗುಣಲಕ್ಷಣಗಳು ಯಾವುವು ?

**ಅಥವಾ**

ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಗಳು ಯಾವುವು ?

33. ಅಂಚೆ ಕಛೇರಿಗಳು ನೀಡುತ್ತಿರುವ ಹಣಕಾಸಿನ ಸೇವೆಗಳನ್ನು ತಿಳಿಸಿ.

**ಅಥವಾ**

ಉದ್ಯಮಿಯ ಮುಖ್ಯ ಕಾರ್ಯಗಳನ್ನು ಪಟ್ಟಿ ಮಾಡಿ.

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $4 \times 4 = 16$

34. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫಲವಾಗಲು ಕಾರಣಗಳನ್ನು ವಿವರಿಸಿ.

35. ಡಾ. ಬಿ.ಆರ್. ಅಂಬೇಡ್ಕರ್‌ರವರ ಸಾಮಾಜಿಕ ಸಮಾನತೆಯ ಕಾಳಜಿಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟೀಕರಿಸಿ.

**ಅಥವಾ**

"ತೀವ್ರವಾದಿಗಳು ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು." ಹೇಗೆ ?

36. ಸಿಂಧೂ ಬಯಲಿನ ನಾಗರೀಕತೆಯಿಂದ ಪ್ರಾರಂಭಿಸಿ ಇತ್ತೀಚಿನವರೆಗಿನ ಭಾರತ ಮತ್ತು ಚೀನಾಗಳ ಸಂಬಂಧವನ್ನು ವಿವರಿಸಿ.

37. ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯ ಪ್ರಾಮುಖ್ಯತೆ ಏನು ?



https://byjus.com

VI. 38. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 4 = 5

a) $23\frac{1}{2}^{o}$ ಉತ್ತರ ಅಕ್ಷಾಂಶ

b) ಗೋವಿಂದ ಸಾಗರ

c) ಮುಂಬೈ ಹೈ

d) ತೂತುಕುಡಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು ? 5



https://byjus.com

BYJU'S The Learning App





https://byjus.com